







ದೇವಾಲಯಗಳಿವೆ) ಈ ದೇವಸ್ಥಾನದ ಮುಂದೆ ಹಂಸದ ಸುಂದರ ಶಿಲ್ಪವಿದೆ. ಇಲ್ಲಿನ ಮಹಾದೇವ, ಬದ್ರಿ ನಾರಾಯಣ, ಗಾಯತ್ರಿ, ವರಾಹ ದೇಗುಲಗಳೂ ಪ್ರಸಿದ್ಧ.

ಪುಷ್ಕರದಲ್ಲಿ ಕಾರ್ತಿಕ ಮಾಸದಲ್ಲಿ ನಡೆಯುವ 'ಪುಷ್ಕರ ಮೇಳ' ತುಂಬ ಹೆಸರಾಗಿದೆ. 'ಪುಷ್ಕರ ಮೇಳ'ದಲ್ಲಿ ಏಷ್ಯಾದಲ್ಲೇ ಅತಿದೊಡ್ಡ ಜಾನುವಾರು ಸಂತೆ ಜರಗುತ್ತದೆ. ಈ ಜಾನುವಾರು ಸಂತೆಯಲ್ಲಿ ದನ, ಎತ್ತು, ಒಂಟೆ, ಆಡು, ಕುದುರೆ, ಕತ್ತೆಗಳ ಮಾರಾಟವೂ ನಡೆಯುತ್ತದೆ. ಇಲ್ಲಿ ನಡೆಯುವ ಮೇಳದಲ್ಲಿ ಜಾನುವಾರು ಸಂತೆ, ಕರಕುಶಲ ವಸ್ತುಗಳ ಪ್ರದರ್ಶನ ಮಾರಾಟ ಇತ್ಯಾದಿಗಳು ಪ್ರಮುಖವಾಗಿರುತ್ತವೆ.

ರಾಜಸ್ಥಾನದ ಕರಕುಶಲ ವಸ್ತುಗಳಿಗೆ ವಿಶ್ವದಾದ್ಯಂತ ಬೇಡಿಕೆಯಿದೆ. ಈ ಮೇಳ ನಡೆಯುವ ಹದಿನಾಲ್ಕು ದಿನಗಳಲ್ಲಿ ಲಕ್ಷಾಂತರ ಜನರು ಇಲ್ಲಿ ಸೇರುತ್ತಾರೆ. ಕುದುರೆ ರೇಸ್, ಒಂಟೆ ರೇಸ್ ಹೀಗೆ ಹತ್ತು ಹಲವು ಸ್ಪರ್ಧೆಗಳೂ ನಡೆಯುತ್ತವೆ.  ಹದಿನಾಲ್ಕು ದಿನಗಳ ಕಾಲ ಇಲ್ಲಿನ ಪರಿಸರವಿಡೀ ರಂಗುರಂಗಿನ ಬಣ್ಣಗಳ ಚಿತ್ತಾರಗಳಿಂದ ಕೂಡಿರುತ್ತವೆ. ದೇಶವಿದೇಶಗಳ ಛಾಯಾಗ್ರಾಹಕರು ಈ ಹಬ್ಬವನ್ನು ಸೆರೆ ಹಿಡಿಯಲು ಆಗಮಿಸುತ್ತಾರೆ. ಈ ಬಾರಿಯ ಪುಷ್ಕರ ಮೇಳ ನವೆಂಬರ್ 2ರಿಂದ 14ರ ವರೆಗೆ ಜರುಗಲಿದೆ.